**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಕುಣಿಗಲ್</u>**

# ಸಿ.ಸಿ.ನಂ.1729/2024

| | | |
|---|---|---|
| ಸಾಕ್ಷಿದಾರನ ಹೆಸರು | :- | ವೇಣು |
| ತಂದೆಯ ಹೆಸರು | :- | ಶ್ರೀನಿವಾಸ್ |
| ವಯಸ್ಸು | :- | 29 ವರ್ಷ |
| ಉದ್ಯೋಗ | :- | ವ್ಯಾಪಾರ |
| ವಾಸ | :- | ಕುಣಿಗಲ್ ಟೌನ್. |

**<u>ಸಾಕ್ಷಿಗೆ ದಿನಾಂಕಃ 20.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಆರೋಪಿತರನ್ನು ನಾನು ನೋಡಿರುವುದಿಲ್ಲ. ಚಾಸಾ.1 ರಿಂದ 3ರವರು ನನ್ನ ಪರಿಚಯಸ್ಥರು. ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**<u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.</u>**

ದಿನಾಂಕ 14.08.2024ರಂದು ಸಂಜೆ 04.00 ರ ಸಮಯದಲ್ಲಿ ಕುಣಿಗಲ್ ಟೌನ್ ಸಂತೇಬಿದಿಯಲ್ಲಿ ಶ್ರೀ ಶುಭ ಫಾರ್ಮ ಮೆಡಿಕಲ್ ಮತ್ತು ಚಾಸಾ.1 ರವರ ಅಂಗಡಿ ಮುಂಭಾಗದ ರಸ್ತೆಯಲ್ಲಿ ಆರೋಪಿತರು ಚಾಸಾ.2 ರವರಿಗೆ ಬೋಳಿ ಮಗನೆ, ಸೂಳೆ ಮಗನೇ ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದರು ಎಂದರೆ ಸರಿಯಲ್ಲ.

ಅದೇ ದಿನ ಅದೇ ಸಮಯದಲ್ಲಿ 1ನೇ ಆರೋಪಿಯು ಕೈಗಳಿಂದ ಚಾಸಾ.2ರವರ ಎಡಕ್ಕೆ ಭುಜಕ್ಕೆ ಕೈಗಳಿಗೆ ಹೊಡೆದು, ಚಾಸಾ.3 ರವರ ಬಲಕುತ್ತಿಗೆ, ಕಿವಿಗಳಿಗೆ, ಸೊಂಟಕ್ಕೆ, ಎಡಭುಜಕ್ಕೆ

ಮತ್ತು ಚಾಸಾ.1 ರವರ ಸೊಂಟಕ್ಕೆ, ಬಲಕುತ್ತಿಗೆಗೆ, ಬಲಭುಜಕ್ಕೆ , ಹೊಡೆದು ಮತ್ತು 2ನೇ ಆರೋಪಿಯು ಅಲ್ಲಿಗೆ ಬಂದು ಚಾಸಾ.3 ರವರ ಬೆನ್ನಿಗೆ ಹೊಡೆದು ಮತ್ತು ಚಾಸಾ.2 ರವರನ್ನು ತಳ್ಳಿ, ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದರು ಎಂದರೆ ಸರಿಯಲ್ಲ.

ಅದೇ ದಿನ ಅದೇ ಸಮಯದಲ್ಲಿ ಆರೋಪಿತರು ಚಾಸಾ.2 ರವರಿಗೆ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ, ಒಂದು ಗತಿ ಕಾಣಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಜಗಳ ಬಿಡಿಸಿದ್ದೆ ಎಂದರೆ ಸರಿಯಲ್ಲ. ದಿನಾಂಕ 14.08.2024 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿಯು ಒಪ್ಪಿಕೊಳ್ಳದ ಕಾರಣ ಒಪ್ಪಿಕೊಳ್ಳದ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಗಿದೆ. ನನಗೆ ಈ ಪ್ರಕರಣದ ಬಗ್ಗೆ ಎಲ್ಲ ವಿಚಾರಗಳು ಗೊತ್ತಿದ್ದರೂ ಆರೋಪಿತರೊಂದಿಗೆ ರಾಜಿಯಾದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲು ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.